**ಓ.ಎಸ್ ನಂಃ 258/2022**
**ಪಿ .ಡಬ್ಲು–*2***

ಸಾಕ್ಷಿಯನ್ನು ದಿನಾಂಕಃ 07.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ– ಪ್ರತಿವಾದಿ *1*ರವರ ಪರ *ಶ್ರೀ.* ಕೆ ವಿ ಎಸ್ ವಕೀಲರಿಂದ**

ವಾದಿಗಳು ಎಷ್ಟು ಆಸ್ತಿಗಳ ಮೇಲೆ ದಾವಾ ಹಾಕಿದ್ದಾರೆ ಎಂದರೆ ಒಂದು ಅಸ್ತಿಯ ಮೇಲೆ ಹಾಕಿರುತ್ತಾರೆ. ಅದರ ಸರ್ವೆ ನಂ 93 ಅಥವಾ 99 ಇರಬಹುದು. ರೆಡ್ಡಿಹಳ್ಳಿಯಲ್ಲಿ 1 ನೇ ವಾದಿಯ ಮನೆ ಇದೆ ಎಂದರೆ ಸರಿ . ಮೃತ 2 ನೇ ವಾದಿಯ ಮನೆ ಕೂಡ ಇದೆ ಎಂದರೆ ಸರಿ . ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಜಮೀನು ಇದೆಯಾ ಎಂದರೆ ಇಲ್ಲ. ಈ ದಾವಾದಲ್ಲಿ 1 ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ಮನೆಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ . ರೆಡ್ಡಿ ಹಳ್ಳಿಯಲ್ಲಿ 1 ನೇ ವಾದಿಗೆ ಖಾಲಿ ನಿವೇಶನ ಇದೆ ಎಂದರೆ ಸರಿ . ಮನೆ ಹಾಗೂ ನಿವೇಶನಗಳನ್ನು ಸೇರಿಸದೇ ಕೇವಲ ಜಮೀನಿನ ಮೇಲೆ ದಾವೆ ಹಾಕಿ ಪ್ರತಿವಾದಿಗಳಿಗೆ ತೊಂದರೆ ನೀಡಲು ಈ ದಾವಾ ಹಾಕಿರುತ್ತಾರೆ ಎಂದರೆ ಸರಿಯಲ್ಲ.

1 ನೇ ವಾದಿಯ ತಂದೆ ನಾರಾಯಣಪ್ಪ ನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ . ಮೊದಲನೇ ಹೆಂಡತಿಯ ಮಗನ ಹೆಸರು ದೊಡ್ಡಮುನಿಯಪ್ಪ ಎಂದರೆ ಸರಿ . 1 ಮತ್ತು 2 ನೇ ವಾದಿ ಹಾಗೂ 3 ರಿಂದ 5 ಪ್ರತಿವಾದಿಗಳು 2 ನೇ ಹೆಂಡತಿಯ ಮಕ್ಕಳು ಎಂದರೆ ಸರಿ . ವಾದಿ ಹಾಗೂ ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಮನೆಗಳನ್ನು ಸೇರಿಸದೇ ಕೇವಲ ಜಮೀನಿನ ಮೇಲೆ ದಾವೆ ಹಾಕಿದಾರೆ ಎಂದರೆ ಸರಿ . ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

***(ಹರೀಶ್. ಜಿ )***
**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆಎಂಎಫ್ ಸಿ, ಮುಳಬಾಗಿಲು**

**ಓ.ಎಸ್ ನಂಃ *258* /2022**

**ಪಿ .ಡಬ್ಲು–*3***

ಸಾಕ್ಷಿಯನ್ನು ದಿನಾಂಕಃ 07.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ– ವಾದಿಯ ಪರ ಶ್ರೀ. ಕೆ ಎಸ್ ಎಂ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು ಃ– ಪ್ರತಿವಾದಿ *1* ರವರ ಪರ ಶ್ರೀ. ಕೆ ವಿ ಎಸ್ ವಕೀಲರಿಂದ**

1 ನೇ ವಾದಿಯ ತಂದೆಯ ಹೆಸರು ನಾರಾಯಣಪ್ಪ ಎಂದರೆ ಸರಿ. 1 ನೇ ವಾದಿಯ ತಂದೆ ನಾರಾಯಣಪ್ಪ ನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ . ಮೊದಲನೇ ಹೆಂಡತಿಯ ಮಗನ ಹೆಸರು ದೊಡ್ಡಮುನಿಯಪ್ಪ ಎಂದರೆ ಸರಿ . 1 ಮತ್ತು 2 ನೇ ವಾದಿ ಹಾಗೂ 3 ರಿಂದ 5 ಪ್ರತಿವಾದಿಗಳು 2 ನೇ ಹೆಂಡತಿಯ ಮಕ್ಕಳು ಎಂದರೆ ಸರಿ . ರೆಡ್ಡಿಹಳ್ಳಿಯಲ್ಲಿ 1 ನೇ ವಾದಿಯ ಮನೆ ಇದೆ ಎಂದರೆ ಸರಿ . ಮೃತ 2 ನೇ ವಾದಿಯ ಮನೆ ಕೂಡ ಇದೆ ಎಂದರೆ ಸರಿ . ಸದರಿ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿದ್ದಾರೂ ಇಲ್ಲವೂ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. ರೆಡ್ಡಿ ಹಳ್ಳಿಯಲ್ಲಿ 1 ನೇ ವಾದಿಗೆ ಖಾಲಿ ನಿವೇಶನ ಇದೆ ಎಂದರೆ ಸರಿ . ಮನೆ ಹಾಗೂ ನಿವೇಶನಗಳನ್ನು ಸೇರಿಸದೇ ಕೇವಲ ಜಮೀನಿನ ಮೇಲೆ ದಾವೆ ಹಾಕಿ ಪ್ರತಿವಾದಿಗಳಿಗೆ ತೊಂದರೆ ನೀಡಲು ಈ ದಾವಾ ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಜಮೀನು ಇದೆಯಾ ಎಂದರೆ ಇಲ್ಲ. ವಾದಿ ಹಾಗೂ ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಮನೆಗಳನ್ನು ಸೇರಿಸದೇ ಕೇವಲ ಜಮೀನಿನ ಮೇಲೆ ದಾವೆ ಹಾಕಿದಾರೆ ಎಂದರೆ ಸರಿ . ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/–**

***(ಹರೀಶ್. ಜಿ )***

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**